
# ನವಿಲುಗನ್ನಡಿ




ಡಿಸೆಂಬರ್, 2016ರ ಸಂಚಿಕೆಯಲ್ಲಿ ಉಷಾ ನರಸಿಂಹನ್ ಅವರು ಲೇಖಕಿ ವಸುಮತಿ ಉಡುಪ ಅವರೊಂದಿಗೆ ನಡೆಸಿದ ಸಂದರ್ಶನ ಉತ್ತಮವಾಗಿತ್ತು. ಮುಖಪುಟ ಆಕರ್ಷಕವಾಗಿತ್ತು.

**ಕೆ.ವಿ. ಸೀತಾರಾಮ್, ಮಂಗಳೂರು**

ಸಂದರ್ಶನದಲ್ಲಿ ತಮ್ಮ ಬದುಕು–ಬರಹವನ್ನು ಅನಾವರಣಗೊಳಿಸಿದ ವಸುಮತಿ ಉಡುಪ ಮತ್ತು ಪ್ರಬಂಧದ ಮೂಲಕ ಒಳಗಿನ ಮಾತುಗಳನ್ನು ಸರಳವಾಗಿ ಹೇಳಿಕೊಂಡ ರಹಮತ್ ತರೀಕೆರೆ ಇಡೀ 'ಮಯೂರ'ವನ್ನೇ ಆವರಿಸಿಬಿಟ್ಟಿದ್ದಾರೆ.

**ವಾಸುದೇವ ನಾಡಿಗ್ ನೆಲಮಂಗಲ**

ಪ್ರಬಂಧ 'ಭಾಷಣದ ವ್ಯಸನ' ನಮ್ಮ ಬದುಕಿನ ವ್ಯಸನಗಳನ್ನೆಲ್ಲ ಮರೆಸಿ, ತನ್ನ ವ್ಯಸನದಲ್ಲಿ ಆವಾಹನೆಗೊಳಿಸಿ, ಹಾಸ್ಯದ ಹೊನಲನ್ನೇ ಹರಿಸಿ ಮುದಗೊಳಿಸಿತು. ಎಂದಿನಂತೆ 'ಮಯೂರ' ಸಾಹಿತ್ಯಿಕ, ಸಾಂಸ್ಕೃತಿಕ ಜವಾಬ್ದಾರಿಯನ್ನು ಕಾಯ್ದುಕೊಂಡಿದೆ.

**ಜಗದೀಶ ಕೆರೆನಳ್ಳಿ, ಚಿತ್ರದುರ್ಗ**

ಭಾಷಣ ಮಾಡಲಿಚ್ಛಿಸುವವರು, ಆ ಕಲೆಯನ್ನು ಅಭ್ಯಸಿಸುವವರು 'ಭಾಷಣದ ವ್ಯಸನ' ಪ್ರಬಂಧವನ್ನು ತಪ್ಪದೇ ಓದಬೇಕು.

**ನಾರಾಯಣ ಯಾಜಿ, ಶಿರಾಲಿ**

ಎಸ್.ಎನ್. ಸೇತುರಾಮ್ ಅವರ ವಿಶಿಷ್ಟ ಶೈಲಿಯ ಕತೆ 'ಮೌನಿ' ಓದಿಸಿಕೊಂಡಿತು. ತಿಳಿಹಾಸ್ಯದ ಲಾಲಿತ್ಯಪೂರ್ಣ ಪ್ರಬಂಧ 'ಭಾಷಣದ ವ್ಯಸನ' ಮತ್ತೆ ಮತ್ತೆ ಮುದತುಂಬಿತು. ವಸುಮತಿ ಉಡುಪರೊಂದಿಗಿನ ಸಂದರ್ಶನ ತುಂಬ ಇಷ್ಟವಾಯಿತು. ನವಿರು ಪ್ರಶ್ನೆಗಳು ಲೇಖಕಿಯ ಅನಿಸಿಕೆ, ಭಾವನೆಗಳನ್ನು ಅನಾವರಣಗೊಳಿಸುವಲ್ಲಿ ಯಶಸ್ವಿಯಾಗಿವೆ.

**ಬಿ.ಕೆ. ಮೀನಾಕ್ಷಿ, ಮೈಸೂರು**

ಪ್ರತಿಭಾವಂತ ನಾಟಕಕಾರ ಪಿ.ಬಿ. ಧುತ್ತರಗಿ ಕುರಿತು 'ರಂಗವಿಹಂಗಮ'(ಎನ್. ಜಗನ್ನಾಥ ಪ್ರಕಾಶ್) ಅಂಕಣದಲ್ಲಿ ಪ್ರಕಟವಾದ ಬರಹ ಗಮನಸೆಳೆಯಿತು.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**

ಸಂಚಿಕೆಯ ಎಲ್ಲಾ ಬರಹಗಳೂ ಚೆನ್ನಾಗಿವೆ. ಅವುಗಳಲ್ಲಿ ಸಂದರ್ಶನ, ಪ್ರಬಂಧ, ವೈಜ್ಞಾನಿಕ ಕತೆ ಹಾಗೂ ಕವಿತೆಗಳು ಮೆಚ್ಚುಗೆಯಾದವು.

**ಮಧುರ ಸುಬ್ರಹ್ಮಣ್ಯ, ಬೆಂಗಳೂರು**

'ಕನಸು' ಕಥೆ (ಮೂಲ: ಓ ಹೆನ್ರಿ, ಕನ್ನಡಕ್ಕೆ: ಆರ್.ಡಿ. ಹೆಗಡೆ ಆಲ್ಮನೆ) ಅತ್ಯಂತ ಮಾರ್ಮಿಕವಾಗಿದೆ.

**ಎಚ್.ಎಸ್. ಸತ್ಯನಾರಾಯಣ ರಾವ್, ಚಾಮರಾಜನಗರ**

ವಿದೇಶಿ ಕವಯಿತ್ರಿಯರ ಕವಿತೆಗಳನ್ನು ಸರಳ–ಸುಂದರವಾಗಿ ತೇಜಶ್ರೀ ಅನುವಾದಿಸಿದ್ದಾರೆ. ಅವು ಓದುಗರ ಭಾವಲೋಕವನ್ನು ವಿಸ್ತರಿಸುವಂತಿವೆ.

**ಕೆ.ಪಿ. ಅನುರಾಧಾ, ಬೆಂಗಳೂರು**